# ಬಂಡಾಯದ ಹೃದಯ ನೆಲದಲ್ಲಿ ಕಳೆದ ಹಗಲುಗಳು ರಾತ್ರಿಗಳು. – ಮಾವೋವಾದಿ ನೆಲದಲ್ಲಿ.

ಗೌತಮ್ ನವಲಾಖ

ಏಪ್ರಿಲ್ ೨, ೨೦೧೦

[ ಜನವರಿ ೨೦೧೦ರಂದು ಪ್ರಮುಖ ಪ್ರಜಾತಾಂತ್ರಿಕ ಹಕ್ಕುಗಳ ಕಾರ್ಯಕರ್ತ ಗೌತಮ್ ನವಲಾಖ ಸ್ವೀಡನ್ ಬರಹಗಾರ ಜಾನ್ ಮಿರಡಾಲೊಂದಿಗೆ ಮಧ್ಯ ಭಾರತದ ಅರಣ್ಯಗಳಲ್ಲಿ ಸಿ.ಪಿ.ಐ (ಮಾವೋವಾದಿ) ಯ ನಾಯಕತ್ವದೊಂದಿಗೆ ಸಂಭಾಷಣೆ ನಡೆಸಿದರು. ಈ ಕೆಳಕಂಡ ಪ್ರಭಂಧದಲ್ಲಿ–ಸನ್‌ಹತಿಯಲ್ಲಿ ಮಾತ್ರ ಪ್ರಕಟವಾಗಿರುವ– ಅವರು ಮಾವೋವಾದಿ ರಾಜಕೀಯ ಮತ್ತು ದಂಡಕಾರಣ್ಯ ಪ್ರದೇಶದ ಸಮಾಜೋಆರ್ಥಿಕ ಮತ್ತು ಸಾಂಸ್ಕೃತಿಕ ಬದುಕಿನ ಆಯಾಮಗಳನ್ನು

ಬಿಚ್ಚಿಟ್ಟಿದ್ದಾರೆ.– ಸಂ –– ಮೂಲ ಸನ್‌ಹತಿ]

 ಮಾವೋವಾದಿಗಳ ವಿರುದ್ಧ  ಪ್ರತಿಯೊಂದು ಬೈಗುಳಗಳನ್ನು ಎಸೆಯುವಾಗ ಮತ್ತು ನಿಂದೆಗಳನ್ನು ಮಾಡುವಾಗಲೆಲ್ಲಾ ಅರ್ಧ ಸತ್ಯಗಳು ಮತ್ತು ಸುಳ್ಳುಗಳು ರೆಕ್ಕೆಗಳನ್ನು ಪಡೆದುಕೊಳ್ಳಲು ಆರಂಭಿಸುತ್ತವೆ. ಅವರನ್ನು ಗುರುತಿಸಲಾಗುತ್ತದೆ, ಕೂಲಂಕಷವಾಗಿ ಪರಿಶೀಲಿಸಲಾಗುತ್ತದೆ. ಮತ್ತು ಪೈಶಾಚೀಕರಿಸಲಾಗುತ್ತದೆ; ಬುದ್ಧಿಜೀವಿ ವರ್ಗಕ್ಕೆ ವಾಸ್ತವಾಂಶಗಳನ್ನು ಎದುರಿಸಲು ಮನಸಿಲ್ಲ. ಈಗ ನಾವು ವಾಸ್ತವ ಸ್ಥಿತಿಗಳನ್ನು ವಿಶದಗೊಳಿಸಿಕೊಳ್ಳುವ ಮತ್ತು ಕೆಲವು ಮೂಲಭೂತ ಪ್ರಶ್ನೆಗಳಿಗೆ ಉತ್ತರಿಸುವ ಅನಿವಾರ್ಯತೆಗೆ ಒಳಗಾಗಿದ್ದೇವೆ. ಯಾಕೆ ಈ ಯುದ್ಧ ? ಭಾರತದ ಅಂತರಿಕ ಭದ್ರತೆಗೆ 'ಅತೀ ದೊಡ್ಡ ಬೆದರಿಕೆ'  ಆಗಿರುವ ಈ ಜನ ಯಾರು?  ಅವರ ರಾಜಕೀಯ ಏನು ? ಯಾಕೆ ಹಿಂಸೆಯನ್ನು ಸಮರ್ಥಿಸಿಕೊಳ್ಳುತ್ತಾರೆ. ಅವರು  ತಮ್ಮ "ಪ್ರಜಾಯುದ್ಧ" ವನ್ನು, ಅವರ ರಾಜಕೀಯ ಗುರಿಗಳು ಮತ್ತು  ತಮ್ಮನ್ನು ಹೇಗೆ ಗ್ರಹಿಸಿಕೊಂಡಿದ್ದಾರೆ?,  ಹೇಗೆ ಅವರು ಅರಣ್ಯ ಭದ್ರಕೋಟೆಯಿಂದ ಹೊರಜಗತ್ತಿಗೆ ಮುನ್ನೆಗೆತ ಸಾಧಿಸಬಯಸಿದ್ದಾರೆ? ಮಾವೋವಾದಿಗಳ ಬಗ್ಗೆ ಪ್ರಥಮ ಮಾಹಿತಿ ಅಂದರೆ ಕೇವಲ ಸಂಭಾಷಣೆ, ಪುಸ್ತಕಗಳು, ಸಾಕ್ಷ್ಯ ದಾಖಲೆಗಳು ಮಾತ್ರ ಅಲ್ಲದೆ, ನೇರವಾಗಿ ಪ್ರವಾಸ ಕೈಗೊಂಡು ಭೇಟಿಯಾಗಿ ಪೈಶಾಚಿಕರಿಸಿರುವವರನ್ನು ಮನುಷ್ಯರಾಗಿ ಕಾಣುವ ಹಂಬಲ ಹಲವಾರು ವರ್ಷಗಳಿಂದ ಬೆಳೆಯುತ್ತಾ ಬಂದಿತ್ತು. ಎರಡು ಬಾರಿ ನಾನು ಪ್ರವಾಸ ಕೈಗೊಳ್ಳುವ ಹತ್ತಿರಕ್ಕೆ ಬಂದಿದ್ದೆ. ಮೊದಲ ಸಂದರ್ಭ ಇಬ್ಬರು ಯುವ ಪತ್ರಕರ್ತರು ನಿಗದಿತ ಸ್ಥಳಕ್ಕೆ ಬರದೇ ನನಗೆ ಕೈ

ಕೊಟ್ಟಿದ್ದು, ಎರಡನೇ ಬಾರಿ ನಾನು ತುರ್ತು ಮಾಹಿತಿಗೆ ಅನುಗುಣವಾಗಿ ತಯಾರಿ ನಡೆಸಲು ಆಗದೇ ಹೋಗಿದ್ದು. ಈ ಬಾರಿ ನಾನು ಮೂರನೇ ಅವಕಾಶವನ್ನು ಕಳೆದುಕೊಳ್ಳಲು ತಯಾರಿರಲಿಲ್ಲ. ಏನಾದರಾಗಲಿ ನಾನು ಸ್ವೀಡನ್ನಿನ ಬರಹಗಾರ ಜಾನ್ ಮಿರಡಾಲ್‌ರೊಂದಿಗೆ ಜನವರಿ ೨೦೧೦ರಲ್ಲಿ ಹದಿನೈದು ದಿನಗಳ ಕಾಲ ಸಿ.ಪಿ.ಐ (ಮಾವೋವಾದಿ) ವಿವರಿಸುವ ಗೆರಿಲ್ಲಾ ವಲಯ, ಅಲ್ಲಿ ಜಂತಾನಮ್ ಸರ್ಕಾರ್( ಜೆ ಎಸ್) ಅಥವಾ ಅವರ "ಜನತೆಯ ಸರ್ಕಾರ"ದಲ್ಲಿ ತಿರುಗಾಡಿ ನೋಡಿದೆ, ಕೇಳಿದೆ, ಓದಿದೆ, ಚರ್ಚಿಸಿದೆ, ಸಂವಾದ ನಡೆಸಿದೆ, ವಾಗ್ವಾದ ನಡೆಸಿದೆ ಮತ್ತು ವಾದಿಸಿದೆ. "ಗೆರಿಲ್ಲಾ ವಲಯ"ವೆಂಬುದು ಈಗಲೂ ಸರ್ಕಾರ ಹಾಗೂ ಬಂಡಾಯಗಾರರ ನಡುವಿನ ಪೈಪೋಟಿ ಹಾಗೂ ನಿಯಂತ್ರಣದ ಪ್ರದೇಶ, ಅದೇನೆ ಆದರೂ ಈ ಪ್ರದೇಶದಿಂದ ಭಾರತದ ಪ್ರಭುತ್ವ ಬಲವಂತವಾಗಿ ಹಿಂದ್ಸರಿಸಲ್ಪಟ್ಟಿದೆ ಮತ್ತು ಅವರ ಅಧಿಕಾರವನ್ನು ಪುನರ್ ಸ್ಥಾಪಿಸಿಕೊಳ್ಳಲು ಮಿಲಿಟರಿ ಬಲವನ್ನು ಉಪಯೋಗಿಸುತ್ತಿದೆ.

## <u>ಪರಿಚಯ</u>

ಸತ್ಯ, ಅದೇ ಯುದ್ಧದ ಮೊದಲ ಬಲಿ ಎಂದು ಹೇಳಲಾಗಿದೆ. ಹಾಗಾಗಿ ಭಾರತ ಸರ್ಕಾರ ಸಿ.ಪಿ.ಐ( ಮಾವೋವಾಧಿ) ಯ ಮೇಲೆ ಯುದ್ಧ ಹೂಡಿರುವ ವಾಸ್ತವವನ್ನು ಅಲ್ಲಗೆಳೆಯುವುದರಲ್ಲಿ ಆಶ್ಚರ್ಯಪಡಬೇಕಾಗಿಲ್ಲ.! ಬದಲಿಗೆ ನಾಗರಿಕ ಆಡಳಿತ ಪುನರ್ ಸ್ಥಾಪಿಸಲಿಕ್ಕಾಗಿ ಕೇವಲ "ಪೋಲೀಸ್ ಕಾರ್ಯಾಚರಣೆ" ಮಾತ್ರ

ನಡೆಸಲಾಗುತ್ತಿದೆ ಎಂದು ಅದು ಹೇಳುತ್ತಿದೆ. ಒಂದು ಪೋಲೀಸ್ ಕಾರ್ಯಾಚರಣೆ ಎಂದಾಗ ದಂಡ ಲಾಠಿ ಹಿಡಿದಿರುವ ಪೋಲೀಸರು ಗಲಭೆಯುತ ಪ್ರದೇಶದಲ್ಲಿ ಪರಿಸ್ಥಿತಿಯನ್ನು ಪುನರ್ ಸ್ಥಾಪಿಸಲು ಪ್ರಯತ್ನಿಸುತ್ತಿರುವ ಚಿತ್ರಣ ಮನಸ್ಸಿನಲ್ಲಿ ತರುತ್ತದೆ. ಬದಲಿಗೆ ವಿಶೇಷವಾಗಿ ಅರಣ್ಯ ಯುದ್ಧ ತರಬೇತಿ ಪಡೆದ ಕೇಂದ್ರೀಯ ಅರೆ ಸೇನಾ ಪಡೆಯ ೭೫ ಬೆಟಾಲಿಯನ್‌ಗಳು ೧೦೦ ಬೆಟಾಲಿಯನ್ ಗಳಿಗೂ ಅಧಿಕ ರಾಜ್ಯ ಸಶಸ್ತ್ರ ಪೋಲೀಸ್ ಪಡೆ, ಭಾರತೀಯ ಮೀಸಲು ಬೆಟಾಲಿಯನ್‌ಗಳು ಮತ್ತು ಎಸ್.ಪಿ.ಒ ಗಳು, ಎಲ್ಲರೂ ಭಾರ ಶಸ್ತ್ರಗಳೊಂದಿಗೆ ನಿಯೋಜಿಸಲಾಗಿದೆ[೧] ಅಲ್ಲದೆ ಕೇಂದ್ರ ಗೃಹಮಂತ್ರಿ ಪಿ.ಚಿದಂಬರಂ ಎಷ್ಟು ಬೇಕೋ ಆ ಮಟ್ಟದ ಪಡೆಗಳನ್ನು ಮಾವೋವಾದಿಗಳ ಮೇಲೆ ಬಳಸಲು ಭಾರತ ಸರ್ಕಾರಕ್ಕೆ “ಶಾಸನ ಬದ್ಧ ಹಕ್ಕು” ಇದೆ ಎಂದು ನೇರವಾಗಿ ಸಮರ್ಥಿಸಿಕೊಂಡಿದ್ದಾರೆ( ಟೈಮ್ಸ್ ಆಫ್ ಇಂಡಿಯಾ ಮಾರ್ಚ್೧೩, ೨೦೧೦) ಒಂದು ಅಸಾಮಾನ್ಯ ನಿಯಂತ್ರಣದ ಪ್ರಭುತ್ವ ಇಲ್ಲಿ ಅಸ್ತಿತ್ವದಲ್ಲಿದೆ ಬೇರೆಯದರ ಜೊತೆಗೆ ಮಾವೋವಾದಿ ಗೆರಿಲ್ಲಾಗಳು ಹಿಡಿದಿಟ್ಟುಕೊಂಡಿರುವ ಪ್ರದೇಶಕ್ಕೆ ಹೋಗುವ ಮತ್ತು ಬರುವ ಮಾರ್ಗಗಳನ್ನು ನಿಯಂತ್ರಿಸುತ್ತದೆ, ಒಂದು ರೀತಿಯಲ್ಲಿ ಬೇರೆ ಯಾವುದೋ ದೇಶಕ್ಕೆ ಪ್ರವೇಶಿಸುತ್ತಿರುವಂತೆ ಅನಿಸುತ್ತದೆ. ಜನರು ಪೋಲೀಸ್ ಸೂಪರಿಂಟೆಂಟ್ ರ ಸಹಿ ಇರುವ ಗುರುತಿನ ಚೀಟಿ ಇಟ್ಟುಕೊಳ್ಳದಿದ್ದರೆ ಅವರು ಈ ಪ್ರದೇಶಕ್ಕೆ ಪ್ರವೇಶಿಸಲು ಇಲ್ಲವೆ ಹೊರಬರಲು ಸಾಧ್ಯವಾಗುವುದಿಲ್ಲ. ವಸ್ತುಗಳ ಸಾಗಾಟವನ್ನು ಕೂಡ

ಇದು ಕುಂಠಿತಗೊಳಿಸಿದೆ. ವಾರದ ಸಂತೆಯನ್ನು ರಕ್ಷಣಾ ಶಿಬಿರಗಳಿಗೆ ಸ್ಥಳಾಂತರಿಸಲಾಗಿದೆ, ಅಲ್ಲಿ ನಿತ್ಯೋಪಯೋಗಿ ಆಹಾರ ವಸ್ತುಗಳನ್ನು ಯಾರಿಗೆ, ಎಷ್ಟು ಜನರಿಗೆ ಎಂಬ ವಿವರಗಳನ್ನೆಲ್ಲಾ ದಾಖಲಿಸಬೇಕು ಅಲ್ಲದೆ ಅನುಮತಿಸಿದ ಆಹಾರ ವಸ್ತುಗಳು ಒಂದು ವಾರಕ್ಕಿಂತಲೂ ಹೆಚ್ಚು ಕಾಲ ಉಳಿಯುವುದಿಲ್ಲ. ಅರಣ್ಯದಲ್ಲಿ ಜನರು ವಾರದ ಹಾತ್ ( ಮಾರುಕಟ್ಟೆ) ಕೆಲವು ಗಂಟೆಗಳಷ್ಟು ನಡೆದು ತಲುಪಬಹುದಿತ್ತು. ಈಗ ಪ್ರಯಾಣದ ಅವಧಿ ಇಡೀ ಒಂದು ದಿನ, ಎರಡು ದಿನವೂ ಆಗಬಹುದು, ಕಾರಣ ಸ್ಥಳ ಮತ್ತು ತಡೆಗಳನ್ನು ( ಗುರುತಿನ ಚೀಟಿಗಳು, ತನಿಕಾ ತಾಣ, ಶಿಬಿರಗಳಲ್ಲಿ ದಾಖಲಿಸುವುದು, ಬ್ಯಾಗುಗಳ ತಪಾಸಣೆ) ಹೇರಿರುವುದು.

ಮಾವೋವಾದಿಗಳ ಮೇಲಿನ ಯುದ್ಧ ಅನ್ನೋದು ಕೇವಲ ಪ್ರಸ್ತುತ ರೂಪಿತವಾಗಿರುವ ಭಾರತದ ಪ್ರಭುತ್ವವನ್ನು ಅವರು ಕಿತ್ತೊಗೆಯಲು ಬಯಸಿದ್ದಾರೆ ಎಂಬ ಕಾರಣದಿಂದಲ್ಲ. ಅದಕ್ಕಾಗಿ ಅವರು ಹತ್ತಿರ ಹತ್ತಿರ ಕಳೆದ ಅರ್ಧ ಶತಮಾನದಿಂದಲೂ ಹೋರಾಡುತ್ತಿದ್ದಾರೆ[೨]. ಅವರೇ ಒಪ್ಪಿಕೊಂಡಂತೆ ಅದಕ್ಕೆ ಇನ್ನೂ ೫೦-೬೦ ವರ್ಷಗಳು ಅವರಿಗೆ ಬೇಕಾಗಬಹುದು. ಪ್ರಧಾನಿಯ ಮಾತುಗಳನ್ನು ತೆಗೆದುಕೊಳ್ಳುವುದಾದರೆ ಅವರ ಸೇನಾ ಶಕ್ತಿಯನ್ನು ಉಲ್ಲೇಖಿಸುತ್ತಾ ಮಾವೋವಾದಿಗಳು